ಯಾರೂ ಕೇಳುದಿಲ್ಲ. ಹಂಗ ಹಲ್ಲಾಗ ನಾಲಗಿ ಹಾಕ್ಕೊಂಡ ಸುಮ್ಮ ಇರತೀರಿ. ನಾವು ಒಂದ ದಿನಾ ಹಚ್ಚಿರ ಹಂಗ್ಯಾಕ ಕಾಗಿಗತೆ 'ಕಾವ್ ಕಾವ್' ಮಾಡತೀರಿ?' ಎಂದಾಗಲೂ ಕಾಳವ್ವನ ಸುದ್ದಿಗೆ ಹೋಗದೇ ಇವರು ಹಚ್ಚಿದ ಪೈಪನ್ನು ಮಾತ್ರ ಕಿತ್ತೊಗೆದಿದ್ದರು. ಆಗ ಅವರೂ ವಟಗುಡುತ್ತಲೇ ಕೊಡಗಳನ್ನು ತುಂಬಿ ತೆಗೆದುಕೊಂಡು ಹೋದಳು. ಮುತ್ತವ್ವಳ ಹಾಗೇ ಕೆಲವರು ಅಷ್ಟೇ ಏಕೆ? ಅಲ್ಲಿಯೇ ಹತ್ತಿರದ ಸಾಹುಕಾರ ಮಹಾದೇವಯ್ಯನವರ ಮನೆಯವರು ಪೈಪು ಹಚ್ಚಿದರೂ ಕೂಡ ಯಾರೂ ಜಗ್ಗುತ್ತಿರಲಿಲ್ಲ.

ಕಾಳವ್ವ ಹೊಸ ಮನೆಯನ್ನು ಕಟ್ಟುತ್ತಿದ್ದಳು. ಅರ್ಧಕ್ಕಿಂತಲೂ ಹೆಚ್ಚು ಬೆಳೆದು ನಿಂತ ಮನೆ ಆ ನಳದ ನೀರನ್ನೇ ಉಂಡಿತ್ತೆಂದು ಬೇರೆ ಹೇಳಬೇಕಿಲ್ಲ. ಹೀಗಿರುವಾಗಲೇ ಆ ನಳ ಇದ್ದಕ್ಕಿದ್ದಂತೇ ಬಂದ್ ಆಗಿತ್ತು. ಕಮಿಟಿ ಜನ ಒಂದು ದಿನ, ಎರಡು ದಿನ.. ಏಳು ದಿನಗಳವರೆಗೆ ಕಾಯ್ದದ್ದಲ್ಲದೇ ಪಂಚಾಯತಿಗೂ ದೂರು ಕೊಟ್ಟಿದ್ದರು. ಆದರೂ ಕೂಡ ಯಾವುದೇ ವ್ಯವಸ್ಥೆಯಾಗಿರಲಿಲ್ಲ. ನೀರಿಲ್ಲದೇ ಬಾಯಿ ತೆರೆದು ಕುಳಿತ ಆ ಅರ್ಧ ಕಟ್ಟಡಕ್ಕೆ ಹಣ ಹಾಕಿ ನೀರು ತರಿಸಿಕೊಳ್ಳಲಾಗದೇ ಕಾಳವ್ವ ಸಂಕಟಪಟ್ಟಿದ್ದಳು. ಆಕೆಯ ಮನೆ ಮುಂದೆಯೇ ಹಾಯ್ದು ಹೋಗುತ್ತಿದ್ದ ಪಂಚಾಯತಿ ವಾಟರ್‌ಮನ್ ಮಲ್ಲೇಶಿಯನ್ನು 'ಊರಾಗಿನ್ನ ಎಲ್ಲಾ ಬೋರು ನಿನ್ನುವ ಅಂತ ನೀ ಏನು ಎದಿ ಉಬ್ಬಿಸಿಕೊಂಡ ಹೋಗಬ್ಯಾಡಾ. ಮೊದಲ ಈ ಬೋರ್ ಸುದ್ದ ಮಾಡ ಸಾಕ' ಎಂದು ಬೈದಾಗ, 'ಏ ಆ ಬೋರ್ ಸುದ್ದ ಮಾಡಾಕ ಬೋರ್ ಗಾಡಿ ಬರಬೇಕರಿ. ಪಂಚಾಯತಿಗೆ ಬಂದ ಹೇಳರಿ ನಾ ಏನ ಮಾಡುವವಾ' ಎಂದು ಗೊಣಗುತ್ತ ಮುಂದೆ ಸಾಗಿದ್ದ.

ಹತ್ತು ದಿನ ಕಳೆದರೂ ನಳದಲ್ಲಿ ನೀರು ಬಾರದೇ ಹಚ್ಚ ಹಸಿರ ಕಾಡು ಒಮ್ಮಿಂದೊಮ್ಮೆಯೇ ಬಣಗುಡುವ ಮರುಭೂಮಿಯಂತಾಗಿತ್ತು. ಯಾವಾಗ ನೋಡಿದರೂ ಕೊಡ ಬಕೇಟುಗಳಿಂದ ತುಂಬಿ ತುಳುಕುತ್ತಿದ್ದ ಹಾಗೂ ಸುತ್ತಲೂ ನೀರು ತುಂಬುವ ಜನರಿಂದ ಕೂಡಿರುತ್ತಿದ್ದ ಜಾಗ ಬಿಕೋ ಎನ್ನತೊಡಗಿತು. ಆ ಜನರ ಸಹನೆಯ ಕಟ್ಟೆಯೊಡೆದು ಪಂಚಾಯತಿಗೆ ಮುತ್ತಿಗೆ ಹಾಕಿದರು. ಫೈಲುಗಳಲ್ಲಿ ಮುಳುಗಿ ಹೋದ ಅಭಿವೃದ್ಧಿ ಅಧಿಕಾರಿ, ಒಮ್ಮೆಲೇ ಸುನಾಮಿ ಅಲೆಯಂತೆ 'ದ್ವೆ' ಎಂದು ಎಗರಿದ ಜನರನ್ನು ಕಂಡು ಗಾಬರಿಯಾದರು ಜವಾನ ಅವರನ್ನು ಎಷ್ಟೇ ತಡೆಯಲು ಪ್ರಯತ್ನಿಸಿದರೂ ಕೇಳದೇ 'ಹತ್ತ ಹದಿನೈದ ದಿನಾ ಆತು ನಮಗ ನೀರಿಲ್ಲಾ. ನಾವೇನ ಇನ್ನ ಎಷ್ಟ ದಿನಾ ಅಂತ ಕಾಯೂಣು?' 'ಪಂಚಾಯ್ತಿಗೆ ಎಷ್ಟ ಸಲಾ ಎಡತಾಕೂಣು?' ಎಂದೆಲ್ಲ ಕೂಗಾಡ ತೊಡಗಿದರು. ಅಧಿಕಾರಿ 'ಒಬ್ಬರ ಹೇಳರಿ ಹಿಂಗ ಮಾಡಿದ್ರ ನನಗೇನ ತಿಳೀತೈತಿ?' ಎಂದ ಮೇಲಷ್ಟೇ ಒಂದಿಬ್ಬರು ಸಮಸ್ಯೆಯನ್ನು ಅರುಹಿದರು. ಪರಿಸ್ಥಿತಿಯ ಅರಿವಾಗಿ ಅಧಿಕಾರಿ 'ಏ ಆ ವಾಟರ ಮನನ ಕರೀರಿ' ಎಂದು ಸೂಚಿಸಿ ಜನರೊಂದಿಗೆ ಚರ್ಚಿಗಿಳಿದರು. 'ನೋಡ್ರಿ ನೀವು ಈಗ ನೀರು ಬಂದ ಆದಾಗ ಬರ್ತೀರಿ ಹಂಗ ನೀರ ಹಾಳಾಗಿ ಹರಕೊಂಡ ಹೋಗುಹೊತ್ತಿನ್ಯಾಗ ಯಾರೂ ಹೇಳಾಕ ಬರೂದಿಲ್ಲಾ.'

'ಏ ಇಲ್ರಿ ಸಾಹೇಬ್ರ ಹಂಗೇನ ಇಲ್ರಿ ಎಲ್ಲಾರಿಗೂ ಸಾಕಾಗುವಂಗ ನೀರ ಬರೂದಿಲ್ಲಾ. ಇನ್ನ ಹಾಳ ಎಲ್ಲಿಂದ ಬಂತರಿ? ಬೋರಿಗೆ ನೀರ ಕಮ್ಮಿ ಆಗೇತ್ರಿ'

'ಆಗದ ಏನ ಮಾಡೀತು? ನಳಾ ಇಲ್ಲದಲ್ಲಿ ಒಂದೆರಡ ಕಡೆ ಬೋರ್ ಕೊರಸಿದ್ರ ವಾರ್ಡ ಮೆಂಬರಗಳೆಲ್ಲಾ ನಮಗೊಂದ ಬೇಕ್ರಿ ನಿಮಗೊಂದ ಅಂತ ಕಾಂಪಿಟೇಶನ್ ಮ್ಯಾಲೆ ಬೋರ್ ಕೊರಿಸಿ ಭೂಮಿ ಎಲ್ಲಾ ತೂತ ಮಾಡಿರು. ಹಿಂಗ ಬೋರ್ ಕೊರದ ಕೊರದ ಇದ್ದಬದ್ದ ನೀರೆಲ್ಲಾ ಹೊರಗ ಹಾಕಿ ಕುಂತ್ರ ನೀರು ಎಲ್ಲಿಂದ ಬಂದಾವು? ಅಂತರ್ಜಲಾ ಉಳಸಬೇಕು ಬೆಳಸಬೇಕು ಅಂತ ಯಾರ ಅಂತಾರಾ?' ಹೀಗೆ ಜನರ ಹಾಗೂ ಅಧಿಕಾರಿ ಮಧ್ಯ ಚರ್ಚೆ ವಾಗ್ವಾದ ನಡೆದಿತ್ತು. ಅಷ್ಟರಲ್ಲಿ ವಾಟರಮನ್ ಬಂದು ಆ ಬೋರವೆಲ್ಲಿನಲ್ಲಿ ಸಣ್ಣ ಸಣ್ಣ ಕಲ್ಲುಗಳು ಬಿದ್ದಿವೆ. ಅದಕ್ಕಾಗಿ ಬೋರ್ ರಿಪೇರಿ ಗಾಡಿ ಬರಬೇಕು ಎಂದು ವಿಷಯ ತಿಳಿಸಿದಾಗ, ಅಧಿಕಾರಿ 'ನೋಡ್ರಿ ಈಗ ಏನ ಮಾಡೂದು? ತಪ್ಪ ಯಾರದು? ಈ ಸಾರ್ವಜನಿಕ ಆಸ್ತಿ ಅಂದ್ರ ಹಿಂಗ. ಬಳಸಾಕ ಬೇಕ ಆದ್ರ ಅವ್ವನ್ನ ಚೊಲೊತಂಗ ನೋಡಕೊಳ್ಳಾಕ ಬ್ಯಾಡಾ ಹಿಂಗ ಆಕ್ಕತಿ ನೋಡ್ರಿ' ಎನ್ನುವುದರೊಂದಿಗೆ ಬೋರವೆಲ್ ಎರಡು ದಿನಗಳಲ್ಲಿ ಸರಿಪಡಿಸುವುದಾಗಿ ಆಶ್ವಾಸನೆ ಕೊಟ್ಟ ನಂತರವಷ್ಟೇ ಆ ಜಾಗ ಖಾಲಿ ಮಾಡಿದರು.

ಮರುದಿನವೇ ಬೋರ್ ಗಾಡಿ ಬಂದು ಸರಿಪಡಿಸಿ ಹೋದ ಮೇಲೆ ನಲ್ಲಿಯಲ್ಲಿ ನೀರು ಚಿಮ್ಮಿತ್ತು. ಮತ್ತೆ ಮೊದಲಿನಂತೆ ಕೊಡ ಬಕೇಟುಗಳು ನಳಕ್ಕೆ ಶೋಭೆ ತಂದಿದ್ದವು. ಜೊತೆಗೆ ಕಮಿಟಿಯ ಕಲಹ ಸದ್ದುಗದ್ದಲ ಜಾಗವನ್ನು ಉಲುವು ಮಾಡಿತ್ತು.

* * *

ಸಾರ್ವಜನಿಕ ಬೋರ್ ರಿಪೇರಿ ಆಗುವುದರಲ್ಲಿ ಸಾಹುಕಾರ ಮಹದೇವಯ್ಯನವರ ಬೋರ್ ಕೆಟ್ಟುಹೋಗಿ, ಸಾರ್ವಜನಿಕ ನಳವನ್ನು ಆಶ್ರಯಿಸಬೇಕಾಯಿತು. ಪಾಪ ಆ ಮನೆಯವರಿಗೆ ಕೊಡ ಹೊರಲೇ ಬರುತ್ತಿರಲಿಲ್ಲ ಅಷ್ಟೇ ಅಲ್ಲ ಕೊಡ ಹೊರುವ ಪ್ರಮೇಯವೇ ಇಲ್ಲದಿದ್ದರಿಂದ ಪ್ಲಾಸ್ಟಿಕ್ ಕೊಡಗಳೂ ಇರಲಿಲ್ಲ. ಹೀಗಾಗಿ ಸಾರ್ವಜನಿಕ ನಳಕ್ಕೆ ಪೈಪು ಹಚ್ಚಬೇಕಾಯಿತು. ಇದರಿಂದ ಮತ್ತೆ ಜಗಳ ಹುಟ್ಟಿಕೊಂಡಿತು. ಎಲ್ಲರೂ ನೀರು ತುಂಬಿಕೊಂಡ ನಂತರ ಪೈಪು ಹಚ್ಚಿದರೂ ಬೇಕೆಂದೇ ಕೊಡ ತೆಗೆದುಕೊಂಡು ಇವರ ಪೈಪು ಕಿತ್ತು ಕೊಡ ತುಂಬಿಕೊಳ್ಳುತ್ತಿದ್ದರು.

'ಏನ್ರೆವಾ ಒಂದೀಟು ಪೈಪ್ ಹಚ್ಚಗೊಡದ ಕೊಡಾ ತುಗೊಂಡ ಬರ್ತೀರೆಲ್ಲ ಟಾಕೆಕ್ಕ ನಾಕ ಕೊಡಾನಾರ ನೀರ ಬೀಳಲಿ ತಡೀರಿ' ಎಂದರೆ, 'ನೀವು ನಮ್ಮಂಗ ಇಲ್ಲೆ ನಂಬರ ಹಚ್ಚಿ ಕೊಡಾ ತುಂಬಕೊಂಡ ಒಯ್ಯರಿ. ಹಿಂಗ ಎಲ್ಲಾರೂ ಪೈಪ್ ಹಚ್ಚಕೊಂಡ್ರ ಹ್ಯಾಂಗ್ರಿ?' ಎನ್ನುತ್ತಿದ್ದರು. ಇಲ್ಲವೇ ಇವರಿಗೆ ಗೊತ್ತಾಗದಂತೆ ಬೋರ್ ಬಟನ್ ಬಂದ್ ಮಾಡುತ್ತಿದ್ದರು. ಆದರೂ ಕೂಡ ಮತ್ತೆ ಚಾಲೂ ಮಾಡಿದಾಗ ಮತ್ತೆ ಪೈಪು ಹಚ್ಚಿಕೊಳ್ಳುತ್ತಿದ್ದ ಇವರನ್ನು ಕಂಡು ಮತ್ತೆ ಒಂದಿಬ್ಬರು ಪೈಪು ಹಚ್ಚತೊಡಗಿದಾಗ ದೊಡ್ಡ ಜಗಳವೇ ಹುಟ್ಟಿ ಅದು ಪಂಚಾಯತಿವರೆಗೂ ಹೋಯಿತು. ಅಷ್ಟೇ ಅಲ್ಲ ಬೇರೆ ಓಣಿಗಳಿಂದಲೂ ಇದೇ ತರಹ ಪೈಪು ಹಚ್ಚುವ ದೂರುಗಳು ಬಂದಿದ್ದರಿಂದ ಅಧಿಕಾರಿ, ಊರಿನಲ್ಲಿ ಸರಬರಾಜಾಗುವ ನೀರಿನ ಬಗ್ಗೆ ವಿಶೇಷ ಸಭೆಯನ್ನು ಕರೆದರು.

* * *

ವಿಶೇಷ ಸಭೆಯಲ್ಲಿ ಅಧಿಕಾರಿ ವಿಷಯವನ್ನು ಎತ್ತಿದಾಗ ಒಬ್ಬೊಬ್ಬರಾಗಿ ತಮ್ಮ ತಮ್ಮ ವಾರ್ಡುಗಳಲ್ಲಿ ನಡೆದ ನಳ ಹಾಗೂ ನಳಕ್ಕೆ ಹಚ್ಚಿದ ಪೈಪುಗಳ ಜಗಳಗಳನ್ನು ಹೇಳತೊಡಗಿದರು. ಅಧ್ಯಕ್ಷರು 'ನೋಡ್ರಿ ಎಲ್ಲಾರೂ ಬರೇ ಜಗಳಾನ ಹೇಳಾಕತ್ತೀರಿ ಇದಕ ಪರಿಹಾರಾ ಹೇಳ್ರೆಲಾ' ಎಂದಾಗ ಸದಸ್ಯರುಗಳು ಜೊತೆಗೆ ಅಧಿಕಾರಿ 'ನೀವ ಹೇಳಿಬಿಡ್ರೆಲಾ ಅಧ್ಯಕ್ಷರ' ಎಂದರು. 'ನೋಡ್ರಿ ನನ್ನ ವಿಚಾರ ಏನ ಅಂತ ಅಂದ್ರ ಮೊದಲ ಈ ಪೈಪು ಮೋಟಾರು ಹಚ್ಚುದುನ್ನ ಬಂದ ಮಾಡಬೇಕು. ಈ ಬ್ಯಾಸಗಿ ಕಾಲದಾಗ ಅಂತರ್ಜಲಾ ಕಡಿಮಿ ಆಗಿರತೈತಿ. ನಾವು ಇದ್ದ ನೀರೊಳಗ ಎಲ್ಲಾರನ್ನೂ ಸಂತೃಪ್ತಿಪಡಿಸಬೇಕ. ಎಲ್ಲಾರೂ ನಂಬರ ಹಚ್ಚಿ ತುಂಬಕೊಂಡ್ರ ಏನೂ ಆಗೂದಿಲ್ಲಾ. ಆದ್ರ ಪೈಪ ಹಚ್ಚಿದ್ರ ಹೊತ್ತ ತರು ತ್ರಾಸ ಇರೂದಿಲ್ಲಾ ಹಿಂಗಾಗಿ ಒಂದ ಕೊಡಾ ನೀರ ಚೆಲ್ಲುವಲ್ಲೆ ಎರಡ ಕೊಡಾ ಚೆಲ್ಲಾತಾರಾ ಅದಕ ಒಟ್ಟ ಪೈಪ್ ಹಚ್ಚೂದು ಬಂದ ಮಾಡಿ ಬಿಡ್ರೆಪಾ'.

'ಹೌದ್ರಿ ನೀವೆಲ್ಲಾ ಹೇಳತೀರಿ ಅಧ್ಯಕ್ಷರ ಈಗ ಪೈಪ್ ಹಚ್ಚಿ ರೂಢಿ ಆದ ಮಂದಿ ಹೇಳಿದ ಕೂಡಲೇ ಬಿಟ್ಟಬಿಡುದಿಲ್ಲಾ. ಅದಕ್ಕ ಏನಾರ ಮಾಡಬೇಕ ಮತ್ತ?' ಎಂಬ ಸದಸ್ಯರೊಬ್ಬರ ಮಾತನ್ನು ಉಳಿದವರೆಲ್ಲಾ ಅನುಮೋದಿಸಿದರು. ಅಧ್ಯಕ್ಷ 'ಮತ್ತ ಏನ ಮಾಡೂದ್ರು ಸಾಹೇಬ್ರ?' ಎಂದು ಅಧಿಕಾರಿಯನ್ನು ಕೇಳಿದಾಗ, 'ನಿಮ್ಮ ಮಾತೂ ಖರೇನ ಸುಮ್ಮನ ಹೇಳಿದ ಮಾತ್ರಕ್ಕ ಪೈಪು ಹಚ್ಚೂದು ಬಿಡೂದಿಲ್ಲಾ ಅದಕ ಒಮ್ಮೆ ಎಲ್ಲಾರಿಗೂ ಇನಸ್ಟ್ರಕ್ಶನ್ ಕೊಡ್ರಿ ಆಮ್ಯಾಲೆನೂ ಪೈಪ್ ಹಚ್ಚಿದ್ರ ದಂಡಾ ಹಾಕ್ರಿ. ಮತ್ತ ಮಲ್ಲೇಶಿ ನೀ ಮದಲ ಶ್ಯಾಣ್ಯಾ ಆಗಬೇಕಪಾ. ನೀ ನೋಡಿದಲ್ಲಿ ಮದಲ ಪೈಪ್ ಕಿತ್ತೊಗಿಬೇಕ'

'ಹೌದ್ರಿ ಸಾಹೇಬ್ರ ಮದಲ ಇವನ್ನ ರಿಕ್ಕ ಮಾಡ್ರಿ. ಮಗಂದ ಇವಂದ ಅರ್ಧಾ ಸವಲತ್ತ ಐತಿ ಇವಾ ಸ್ಟ್ರಿಕ್ ಇದ್ರ ಹಿಂಗ್ಯಾಕ ಆಕ್ಕಿತ್ತು? ಇವಾ ಏನಾರ ಪೈಪ್ ತಗಸಲೀಕ ಇವಗ ದಂಡಾ ಹಾಕ್ರಿ' ಎಂದೆಲ್ಲ ಮಲ್ಲೇಶಿಯನ್ನು ತರಾಟೆಗೆ ತೆಗೆದುಕೊಳ್ಳುತ್ತಲೇ ಕೊನೆಗೆ ಪೈಪು ಹಚ್ಚಿದವರಿಗೆ ದಂಡ ವಿಧಿಸುವುದಾಗಿ ಠರಾವು ಪಾಸ್ ಮಾಡಿದರು.

***

ಪಂಚಾಯತಿಯ ನಿರ್ಣಯವನ್ನು ಕಟ್ಟುನಿಟ್ಟಾಗಿ ಎಲ್ಲರೂ ಪಾಲಿಸಬೇಕೆಂದು ಹಾಗೇಯೇ ಯಾರಾದರೂ ಪೈಪು ಹಚ್ಚಿದ್ದು ಕಂಡಲ್ಲಿ ಜನರು ದೂರು ನೀಡಬೇಕೆಂದೂ, ಗ್ರಾಮದಲ್ಲಿ ಡಂಗುರ ಸಾರಲಾಯಿತು. ಒಂದಿಬ್ಬರಿಗೆ ದಂಡ ವಿಧಿಸಿದ ಮೇಲೆ ಅದು ಅಷ್ಟೇ ಕಟ್ಟುನಿಟ್ಟಿನಿಂದ ಜಾರಿಗೂ ಬಂದಿತು. ಆದರೆ, 'ಏ ಯಾರೂ ಪೈಪ್ ಹಚ್ಚಬ್ಯಾಡ್ರಿ' ಎಂದು ಅಧಿಕಾರ ವಾಣಿಯಿಂದ ಅವಾಜು ಹಾಕುತ್ತ ಸಾಗುತ್ತಿದ್ದ ವಾಟರ್‌ಮನ್ ನ ಕಣ್ಣಿಗೆ ಆ ಅಘೋಷಿತ ಕಮಿಟಿಯ ನಳಕ್ಕೆ ಹಚ್ಚಿದ ಪೈಪು ಹಾವಿನಂತೆ ಕಂಡು ಭಯಗೊಂಡು ಓಟ ಕಿತ್ತ.